ಕರ್ನಾಟಕ ಸರ್ಕಾರ

**ಕಾಲೇಜು ಶಿಕ್ಷಣ ಇಲಾಖೆ**

ದೂ: 080-22343901, 22343904

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು-560001.

ಸಂಖ್ಯೆ:ಕಾಶಿಇ/ಶೈವಿ/218/ಸ್ಕೌಟ್-ಗೈಡ್ಸ್/2015-16

ದಿನಾಂಕ:06.05.2020

**ಸುತ್ತೋಲೆ**

**ವಿಷಯ:** ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವಿಶೇಷ ಯೋಜನೆಯಾದ " ಸಂಕಲ್ಪ ಮತ್ತು IGOT" – ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕ ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ರೋವರ್-ರೇಂಜರ್ ಮತ್ತು ಇತರೆ ವಿದ್ಯಾರ್ಥಿಗಳು ಭಾಗವಹಿಸುವ ಬಗ್ಗೆ.

**ಉಲ್ಲೇಖ:**
1. ರಾಜ್ಯ ಮುಖ್ಯ ಆಯುಕ್ತರು, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ:ಬಿಎಸ್.ಜಿ/ಎಸ್.ಹೆಚ್.ಕ್ಯೂ/013/2020-21 ದಿನಾಂಕ:27.04.2020.
2. ರಾಜ್ಯ ಮುಖ್ಯ ಆಯುಕ್ತರು, ದಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಇವರ ಪತ್ರ ಸಂಖ್ಯೆ:ಬಿಎಸ್.ಜಿ/ಎಸ್.ಹೆಚ್.ಕ್ಯೂ/014/2020-21 ದಿನಾಂಕ:27.04.2020.

********

ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ರಾಷ್ಟ್ರೀಯ ಸಂಸ್ಥೆಯು ಕೋವಿಡ್-19 ಕಾರಣದಿಂದ ಉತ್ತಮ ನಾಳೆಗಾಗಿ ಎಂಬ ಚಿಂತನೆಯಡಿಯಲ್ಲಿ ಮನೆಯಲ್ಲಿಯೇ ಕುಳಿತು ಸ್ಕೌಟ್ಸ್ ಗೈಡ್ಸ್ ರೋವರ್ಸ್, ರೇಂಜರ್ಸ್ ವಿದ್ಯಾರ್ಥಿಗಳಿಗೆ ವಿಶೇಷ ಯೋಜನೆಯ ಸಂಕಲ್ಪ ಮತ್ತು IGOT ಕಾರ್ಯಕ್ರಮವನ್ನು ಆಲ್‌ಲೈನ್ ಮೂಲಕ ಅನುಷ್ಠಾನಗೊಳಿಸಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ದಳನಾಯಕ/ನಾಯಕಿಯರು ಹಾಗು ರೋವರ್ಸ್, & ರೇಂಜರ್ಸ್ ವಿದ್ಯಾರ್ಥಿಗಳನ್ನು ಈ ಕೆಳಕಂಡ ವೆಬ್ ಸೈಟ್ ಹಾಗು ಗೂಗಲ್ ಪಾರಂ ಮೂಲಕ ನೋಂದಾಯಿಸಿಕೊಂಡು ಆ ಮೂಲಕ ವಿವಿಧ ಕೋರ್ಸ್‌ಗಳಲ್ಲಿ ಪಾಲ್ಗೋಳ್ಳಲು ಹಾಗು ಜಿಲ್ಲಾದಿಕಾರಿಗಳಿಂದ ರಚಿಸಲ್ಪಡುವ ಟಾಸ್ಕ್ ಫೋರ್ಸ್‌ಗಳಲ್ಲಿ ಅಗತ್ಯ ಕಾರ್ಯನಿರ್ವಹಿಸಲು ಸಹಕರಿಸಬೇಕೆಂದು ಈ ಮೂಲಕ ಕೋರಲಾಗಿದೆ.

IGOT website –http://igot.gov.in

SANKALPA-Google Form -https://forms.gle/FtZddHm6f5Bsjq8i6

ಮುಂದುವರೆದು ,ಕಾರ್ಯಕ್ರಮದ ರೂಪರೇಷೆಗಳನ್ನು ಈ ಪತ್ರದೊಂದಿಗೆ ಲಗತ್ತಿಸಿ ಪ್ರಾಂಶುಪಾಲರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಸೂಚಿಸಿದೆ.

ಕಾಲೇಜು ಶಿಕ್ಷಣ ಹೆಚ್ಚುವರಿ ನಿರ್ದೇಶಕರು

**ಇವರಿಗೆ:**
1. ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಬೆಂಗಳೂರು, ಮೈಸೂರು, ಶಿವಮೊಗ್ಗ, ಮಂಗಳೂರು, ಧಾರವಾಡ, ಗುಲಬರ್ಗಾ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
2. ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ತಂತ್ರಜ್ಞಾನ ಅಧಿಕಾರಿಗಳು, ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ, ಬೆಂಗಳೂರು-ಈ ಸುತ್ತೋಲೆಯನ್ನು ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.

**ಪ್ರತಿಯನ್ನು:**
1) ರಾಜ್ಯ ಕಾರ್ಯದರ್ಶಿ, ದಿ ಭಾರತ್ ಸ್ಕೌಟ್ಸ್ & ಗೈಡ್ಸ್, ಕರ್ನಾಟಕ, "ಶಾಂತಿ ಗೃಹ", ನಂ.39, ಅರಮನೆ ರಸ್ತೆ, ಬೆಂಗಳೂರು-01.
2) ಆಯುಕ್ತರ, ನಿರ್ದೇಶಕರ, ಹೆಚ್ಚುವರಿ ನಿರ್ದೇಶಕರ, ಮುಖ್ಯ ಆಡಳಿತಾಧಿಕಾರಿಗಳ, ಜಂಟಿ ನಿರ್ದೇಶಕರ ಆಪ್ತಶಾಖೆಗೆ, ಕೇಂದ್ರ ಕಛೇರಿ, ಬೆಂಗಳೂರು.
3) ಕಛೇರಿ ಪ್ರತಿ.

Scanned with CamScanner

**P.G.R. SINDHIA, B.E. (Civil)**
STATE CHIEF COMMISSIONER
Former Minister for Health, Finance,
Home, Industries & Transport
Govt. of Karnataka

State Headquarters
No. 39, "Shanthigruha"
Palace Road
Bengaluru-560 001

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
# THE BHARAT SCOUTS & GUIDES, KARNATAKA

Ref : BSG/SHQ/ 013/20-21 Date : 27/4/2020

ಮಾನ್ಯರೆ,

ವಿಷಯ:- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವಿಶೇಷ ಯೋಜನೆಯಾದ "ಸಂಕಲ್ಪ" ಕಾರ್ಯಕ್ರಮದಲ್ಲಿ ಆನ್‌ಲೈನ್ ಮೂಲಕ ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ರೋವರ್ - ರೇಂಜರ್ ಮತ್ತು ಇತರೆ ವಿದ್ಯಾರ್ಥಿಗಳು ಭಾಗವಹಿಸಲು ಸುತ್ತೋಲೆ ನೀಡುವ ಕುರಿತು.

ಉಲ್ಲೇಖ:- ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಷ್ಟ್ರೀಯ ಸಂಸ್ಥೆ ನವದೆಹಲಿ ಇವರ ಪತ್ರ ಸಂಖ್ಯೆ:37/2020 ದಿನಾಂಕ: 27.03.2020.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆಯು ಕೋವಿಡ್-19 ಕಾರಣದಿಂದ ಉತ್ತಮ ನಾಳೆಗಾಗಿ ಎಂಬ ಚಿಂತನೆಯಡಿಯಲ್ಲಿ ಮನೆಯಲ್ಲಿಯೇ ಕುಳಿತು ಸ್ಕೌಟ್ಸ್, ಗೈಡ್ಸ್, ರೋವರ್ಸ್, ರೇಂಜರ್ಸ್ ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ವಿಶೇಷ ಯೋಜನೆಯ "ಸಂಕಲ್ಪ" ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಅನುಷ್ಠಾನಗೊಳಿದೆ. ಈ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ದಳನಾಯಕ ನಾಯಕಿಯರಿಗೆ ಸೂಕ್ತ ನಿರ್ದೇಶನ ನೀಡಿ ಸುತ್ತೋಲೆ ಹೊರಡಿಸುವುದು ಅವಶ್ಯಕವಾಗಿದೆ.

ಇಡೀ ಜಗತ್ತನ್ನು ಇಷ್ಟೊಂದು ತೀವ್ರವಾಗಿ ಕಾಡುತ್ತಿರುವ ಕೊರೋನಾ ಮಾಹಾಮಾರಿಯನ್ನು ತಡೆಗಟ್ಟುವ ನಿಟ್ಟಿನಲ್ಲಿ ನಾಗರೀಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆ ಹಲವು ವಿಶೇಷ ಕಾರ್ಯಕ್ರಮಗಳನ್ನು ಮನ್ನೆಯಲ್ಲಿಯೇ ಕುಳಿತು ಮಾಡುವ ಸಲುವಾಗಿ ರೂಪಿಸಿದೆ.

**"ಸಂಕಲ್ಪ" ಕಾರ್ಯಕ್ರಮದ ವಿವರಗಳು ಈ ಕೆಳಕಂಡಂತಿರುತ್ತದೆ:-**

ಶೈಕ್ಷಣಿಕ ಮತ್ತು ವಿನೋದ ಎರಡನ್ನು "ಸಂಕಲ್ಪ" ಕಾರ್ಯಕ್ರಮದ ಮೂಲಕ ಮನೆಗೆ ತಲುಪಿಸುವುದು ಹಾಗೂ ಸ್ಕೌಟಿಂಗ್ ಮಾರ್ಗದರ್ಶನ ನೀಡುವುದು ಇದರ ಉದ್ದೇಶ. ಮನೆಯ ಎಲ್ಲಾ ಸದಸ್ಯರುಗಳನ್ನು ಸ್ಕೌಟ್ ಗೈಡ್ ರೋವರ್ ರೇಂಜರ್ ಘಟಕದ ನಾಯಕ/ನಾಯಕಿಯರು ತೊಡಗಿಸಿಕೊಳ್ಳುವುದರ ಮೂಲಕ ಮನೆಯಲ್ಲಿಯೇ ಇದ್ದು ಸ್ಕೌಟ್ ಗೈಡ್ ಸೇವೆ ಸಲ್ಲಿಸುವುದು ಹಾಗೂ ಪರಿಸರ ಜಾಗೃತಿ ಮೂಡಿಸುವುದು

<u>ಮೊದಲನೆ ಹಂತ: ಆರೋಗ್ಯ ಮತ್ತು ಯೋಗಕ್ಷೇಮ</u>

ಸವಾಲು 1: <u>ಪ್ರಸಾರ ಮಾಡುವುದು</u>: ನಿಮ್ಮ ಪರಿಚಿತ ಐದು ಮಂದಿಗೆ ಕರೆಮಾಡಿ ಕೊವಿಡ್ -19 ಹರಡುವಿಕೆ ವಿಧಾನಗಳು, ಹರಡುವಿಕೆಯನ್ನು ಎದುರಿಸಲು ತೆಗೆದುಕೊಂಡ ಕ್ರಮಗಳ ಬಗ್ಗೆ ತಿಳಿಸುವುದು, ನೀವು ತಿಳಿಸಿದ ಐದು ಜನರು ತಮ್ಮ ಪರಿಚಿತ ಐದು ಜನರಿಗೆ ತಿಳಿಸುವುದರ ಮೂಲಕ ಈ ಸರಪಳಿಯನ್ನು ಹೆಚ್ಚಿಸುವುದು #Reachout ಶೀಷಿಕೆ ಅಡಿಯಲ್ಲಿ ಅಪ್‌ಲೋಡ್ ಮಾಡುವುದು.

ಸವಾಲು 2: <u>ಮನೆಯಲ್ಲಿಯೇ ಇರಿ</u>: ನೀವು ಮತ್ತು ನಿಮ್ಮ ಕುಟುಂಬದವರು ಸುರಕ್ಷಿತವಾಗಿ ಮನೆಯಲ್ಲೆಯೇ ಇರುವಂತಹ ಛಾಯಾಚಿತ್ರಗಳನ್ನು ತೆಗೆದು ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ #Stayhome ಎಂಬ ಶೀರ್ಷಿಕೆ ಅಡಿಯಲ್ಲಿ ಸೆಲ್ಫಿಯನ್ನು ಅಪ್‌ಲೋಡ್ ಮಾಡುವುದು.

ಸವಾಲು 3: <u>ಕೈ ತೊಳೆಯುವ ವಿಧಾನ</u>: ನೀವು ಕೈ ತೊಳೆಯುವ ವೀಡಿಯೋವನ್ನು ನಿಮ್ಮ ಎಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ಅಪ್ ಲೋಡ್ ಮಾಡುವುದು.

ಸವಾಲು 4: <u>ಪ್ರದರ್ಶನ ಮಾಡುವುದು</u>: ಮೇಲ್ಕಂಡ ಎಲ್ಲ ಸವಾಲುಗಳ ಅನ್ವಯ ಪ್ರಸಾರ ಮಾಡುವುದು, ಮನೆಯಲ್ಲೇ ಇರಿ, ಕೈತೊಳೆಯುವ ವಿಧಾನ, ಇತ್ಯಾದಿಗಳನ್ನು ನಿಮ್ಮ ಮತ್ತು ನಿಮ್ಮ ಸ್ನೇಹಿತರ ಕ್ರಿಯೆಯನ್ನು ಛಾಯಾಚಿತ್ರಗಳ ಮತ್ತು ಕೋರ್ಸ್ ಪೂರ್ಣಗೋಳಿಸುವಿಕೆ ಪ್ರಮಾಣಪತ್ರವನ್ನು ಯೂಟ್ಯೂಬ್ ಛಾನೆಲ್‌ಗೆ ಅಪ್ ಲೋಡ್ ಮಾಡುವುದು. www.Facebook.com/sankalpbsg

Ph : (Off): 080-22343400 / 22260017 22267470. Fax.: 22261047 Res : 080-26582711/26586725
shq@bsgkarnataka.org www.bsgkarnataka.org shanthigruha@scout.org.in shantigruha@bsgkarnataka.org
Mob : 09845371958 pgrsindhia@gmail.com

Scanned with CamScanner

ಎರಡನೆ ಹಂತ: ಪರಿಸರ ಮತ್ತು ಸುಸ್ಥಿರತೆ

ಸವಾಲು 1: ಅದು ಹೋಗುವವರೆಗೆ ಎಷ್ಟು ಸಮಯ?

ಸಂಶೋಧನೆಯೊಂದರ ಪ್ರಕಾರ, ಭೂಮಿ ಮತ್ತು ಸಮುದ್ರದ ಒಳಗೆ ಕೊಳೆಯುವ ಕೆಲವು ದೈನಂದಿನ ವಸ್ತುಗಳು:

ಪ್ಲಾಸ್ಟಿಕ್ ಬಾಟಲ್: 70-450 ವರ್ಷಗಳು
ಪ್ಲಾಸ್ಟಿಕ್ ಚೀಲ: 500-1,000 ವರ್ಷಗಳು
ಟಿನ್ ಕ್ಯಾನ್: ಸುಮಾರು 50 ವರ್ಷಗಳು
ಚರ್ಮದ ಬೂಟುಗಳು: 25-40 ವರ್ಷಗಳು
ಅಲ್ಯೂಮಿನಿಯಂ: 200 ವರ್ಷಗಳು
ಹಾಲು ಪ್ಯಾಕೆಟ್ (ಟೆಟ್ರಾ) ಕವರ್ ಮತ್ತು
ಪಾನೀಯ ಪ್ಯಾಕೆಟ್‌ಗಳು: 5 ವರ್ಷಗಳು
ನೈಲಾನ್ ಬಟ್ಟೆಗಳು: 30-40 ವರ್ಷಗಳು
ನೈರ್ಮಲ್ಯ ಕರವಸ್ತ್ರ ಮತ್ತು ಮಕ್ಕಳು
ಡೈಪರ್ಗಳು: 500-800 ವರ್ಷಗಳು
ಗಾಜಿನ ಬಾಟಲಿಗಳು: 1,000,000 ವರ್ಷಗಳು
ಹೇರ್ ಸ್ಪ್ರೇ ಬಾಟಲ್: 200-500 ವರ್ಷಗಳು
ಗಾಜಿನ ಬಾಟಲ್: 1-2 ಮಿಲಿಯನ್ ವರ್ಷಗಳು ಆದ್ದರಿಂದ

ನಿಮ್ಮ ಮನೆಯೊಳಗೆ ಪ್ಲಾಸ್ಟಿಕ್‌ನ ಸಮೀಕ್ಷೆ ಮಾಡಿ, ನಿಮ್ಮ ಕುಟುಂಬದವರಿಂದ ಪ್ಲಾಸ್ಟಿಕ್ ಬಳಸದಂತೆ ಪ್ರತಿಜ್ಞೆ ತೆಗೆದುಕೊಳ್ಳಲು ಅವರನ್ನು ಪ್ರೇರೇಪಿಸುವುದು. ನೀವು ಮಾಡಿದ ಕಾರ್ಯಗಳನ್ನ www.Scout.org, ಮತ್ತು #bsgindia #stayathome #scouts4sdgs #plastic challenge #bsgptt #sankalpbyscoutguide ನಲ್ಲಿ ಅಪ್‌ಲೋಡ್ ಮಾಡುವುದು

ಸವಾಲು 2 – # ಪ್ಲಾಸ್ಟಿಕ್ ಟೈಡ್ ಟರ್ನರ್ಸ್

ಜಾಗತಿಕ ಯುವ ಚಳುವಳಿಯಾಗಿದ್ದು ಪ್ರಪಂಚದಾದ್ಯಂತ ಪ್ಲಾಸ್ಟಿಕ್ ಮಾಲಿನ್ಯ ವಿರುದ್ಧ ಯುವಕರಿಗೆ, ವಯಸ್ಕರಿಗೆ ಸ್ಫೂರ್ತಿ ನೀಡುವಂತಹ ಹಾಗೂ ಪ್ಲಾಸ್ಟಿಕ್ ಬಳಕೆಯಿಂದ ಆಗುವ ತೊಂದರೆ ಅದನ್ನು ಕಡಿಮೆ ಮಾಡಲು ಪರಿಹಾರಗಳನ್ನು ಕಂಡುಕೊಳ್ಳುವಲ್ಲಿ ಮನೆ, ಸಮುದಾಯ, ಸಂಸ್ಥೆ, ಕಚೇರಿ ಗಳಲ್ಲಿ ಬಳಸದಂತೆ ನಾವು ತೆಗೆದುಕೊಳ್ಳುವ ಸವಾಲುಗಳ ಬಗ್ಗೆ ಮಾಹಿತಿ ಇದೆ.

WOSM & UNEP ರವರು ಪ್ಲಾಸ್ಟಿಕ್ ಟೈಡ್ ಟರ್ನರ್ಸ್ ಚಾಲೆಂಜ್ ಏರ್ಪಡಿಸಿದ್ದು ನಿಮ್ಮನ್ನು https://www.tide-turners.org ನಲ್ಲಿ ನೊಂದಾಯಿಸುವುದು ನೀವು ಸಹ ಭಾಗವಹಿಸಿ ಪ್ರಮಾಣ ಪತ್ರವನ್ನು ಪಡೆಯುವುದಲ್ಲದೆ. ಸ್ಕೌಟ್ಸ್ / ಗೈಡ್ಸ್ / ರೋವರ್ಸ್ / ರೇಂಜರ್ / ಸ್ಕೌಟ್ ಲೀಡರ್ / ಗೈಡ್ ಲೀಡರ್ ಹಾಗೂ ಇತರರನ್ನು ಭಾಗವಹಿಸುವಂತೆ ಮಾಡಿ.

ಸವಾಲು 3 – #Gogreen

ನಿಮ್ಮ ಮನೆಯಲ್ಲಿರುವ ಹಳೆಯ ಬಟ್ಟೆಯಿಂದ ಕೈ ಚೀಲವನ್ನು ಮತ್ತು ಮಾಸ್ಕ್‌ಗಳನ್ನು ತಯಾರಿಸುವುದು.

ಸವಾಲು 4 – #Goorganic

ಕೊತ್ತಂಬರಿ, ಟೊಮೆಟೊ, ನಾಟಿ ಮಾಡುವ ಮೂಲಕ ಟೆರೇಸ್ ಗಾರ್ಡನ್ ಅಥವಾ ಕಿಚನ್ ಗಾರ್ಡನ್ ಪ್ರಾರಂಭಿಸುವುದು. ಆಲೂಗಡ್ಡೆ, ಹಸಿರು ಮೆಣಸಿನಕಾಯಿ ಇತ್ಯಾದಿಗಳನ್ನು ನಿಮ್ಮ ಮನೆಯಲ್ಲಿ ಮತ್ತು ಹೋಮ್‌ಫಾರ್ಮ್ ಅನ್ನು ಪ್ರಾರಂಭಿಸುವುದು.

ಮೂರನೇ ಹಂತ: ಅರ್ಥ್ ಅವರ್

ಸವಾಲು 1 – #ಪ್ಲಾನೆಟ್‌ಗಾಗಿ ಧ್ವನಿ ಭೂಮಿಯನ್ನು ಸಂರಕ್ಷಿಸಲು ನೀವು ತೆಗೆದುಕೊಂಡ ಪ್ರತಿಜ್ಞೆ ನಿಮ್ಮ ಧ್ವನಿಯನ್ನು ಸೇರಿಸಿ ಮುದ್ರಿಸಿ www.earthhour.org/voice ಲಿಂಕ್‌ನೊಂದಿಗೆ ನಮ್ಮನ್ನು ಹಂಚಿಕೊಳ್ಳಿ.

ಸವಾಲು 2 – #ವರ್ಚುವಲ್ ಕ್ಯಾಂಪ್‌ಫೈರ್

Scanned with CamScanner

ನಿಮ್ಮ ಸ್ನೇಹಿತರಿಗೆ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ಕರೆ ಮಾಡಿ ಮತ್ತು ಸಂಪರ್ಕಿಸಿ, ವಾಸ್ತವಿಕವಾಗಿ ಬೆಂಕಿಹೊತ್ತಿಸಿ ಸಂಭಾಷಣೆಗಳನ್ನು ಮಾಡಿ. ನೀವು ಇಷ್ಟಪಡುವ ಹಾಡುಗಳನ್ನು ಹಾಡಿ.

ಸವಾಲು 3 – #ಗೇಮ್ ಅಟ್ ನೈಟ್

ನಿಮ್ಮ ಕುಟುಂಬ ಅಥವಾ ಸ್ನೇಹಿತರೊಂದಿಗೆ ಮನೆಯಲ್ಲಿ ರಾತ್ರಿಯ ವೇಳೆಯಲ್ಲಿ ವಿದ್ಯುತ್ ದೀಪಗಳನ್ನು ನಂದಿಸಿ ಜೊತೆಗೆ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳು ಮತ್ತು ಇಂಟರ್‌ನೆಟ್‌ಗಳನ್ನು ಸಂಪರ್ಕಗಳನ್ನು ಕಡಿತಗೊಳಿಸಿ ಕುಳಿತು ಹಾಡುವ ಆಟಗಳನ್ನು ಆಡುವುದು.

ಸವಾಲು 4 – #Dinner-in-the-dark

ನಿಮ್ಮ ಮನೆಯಲ್ಲಿ ಒಂದು ಗಂಟೆಗಳಕಾಲ ಎಲ್ಲ ವಿದ್ಯುತ್ ದೀಪಗಳನ್ನು ನಂದಿಸಿ. ಕೇವಲ ಮೇಣದಬತ್ತಿಗಳನ್ನು ಬೆಳಗಿಸಿ ಆರೋಗ್ಯಕರ ಮತ್ತು ರುಚಿಕರವಾದ ಅಡುಗೆಯ ಭೋಜನವನ್ನು. ನಿಮ್ಮ ಕುಟುಂಬದೊಂದಿಗೆ ಆನಂದಿಸಿ. ಸಂಭಾಷಣೆಗಳನ್ನು ಮಾಡಿ. ಸಂದೇಶಗಳನ್ನು ಹೇಳಿ. ನೀವು ಇಷ್ಟಪಡುವ ಹಾಡುಗಳನ್ನು ಹಾಡಿರಿ.

ನಾಲ್ಕನೇ ಹಂತ: ಡಿಜಿಟಲ್ ಸ್ಕೌಟಿಂಗ್ ಗೈಡಿಂಗ್

ಸವಾಲು 1– #ಸರ್ಕಾರಿ ಉಪಕ್ರಮಗಳು /#Government Initiatives#

ನಿಮ್ಮನ್ನು http://igot.gov.in ನಲ್ಲಿ ನೊಂದಾಯಿಸಿಕೊಳ್ಳಿ.iGOTನಲ್ಲಿ BSG ಆಯ್ಕೆಮಾಡಿ. ಕೋವಿಡ್ –19 ಕುರಿತಾದ ಕೋರ್ಸ್ ಗಳನ್ನು ಕಲಿಯಲು ಪ್ರಾರಂಭಿಸಿ.ಕಲಿತ ಕೋರ್ಸ್ ಗಳ ಪ್ರಮಾಣಪತ್ರವನ್ನು ಸ್ಕ್ರೀನ್ ಶಾಟ್ ತೆಗೆದುಕೊಂಡು ,ನಿಮ್ಮ ಸಾಮಾಜಿಕ ಅಂತರ್ಜಾಲದಲ್ಲಿ ಹಂಚಿಕೊಳ್ಳುವುದು.

ಸವಾಲು 2 – #ಇ-ಕಲಿಕೆ

https://sdgs.scout.org/guidelines ಮೇಲ್ಕಂಡ ವೆಬ್ಸೈಟ್ನಲ್ಲಿ ಸ್ಕೌಟಿಂಗ್ ಗೈಡಿಂಗ್ ಅಭಿವೃದ್ಧಿ ಕೋರ್ಸ್ ಕುರಿತು ಇ-ಕಲಿಕೆಯಲ್ಲಿ ನೊಂದಾಯಿಸಿ. ತರಬೇತಿಯಲ್ಲಿ ಪಾಲ್ಗೊಳ್ಳುವುದು.

ಸವಾಲು 3 – #ವಿಡಿಯೋ ಟ್ಯುಟೋರಿಯಲ್

ಯಾವುದಾದರೊಂದು ವಿಧಾನವನ್ನು ಬಳಸಿ ನಕ್ಷೆ ರಚಿಸುವ (ರಸ್ತೆ ಬಳಸಿ) ಕುರಿತು ವೀಡಿಯೊ ಟ್ಯುಟೋರಿಯಲ್ ಮಾಡಿ ಆ ವಿಡಿಯೋವನ್ನು ಯೂಟ್ಯೂಬ್ ಗೆ ಅಪ್ ಲೋಡ್ ಮಾಡುವುದು. ಲಿಂಕನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಳ್ಳುವುದು.

ಸವಾಲು 4 # Youtube ಚಾನೆಲ್

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಯೂಟ್ಯೂಬ್ ಚಾನೆಲ್‌ಗೆ ಭೇಟಿ ನೀಡಿ, https://www.youtube.com/bsgkarnataka ಚಂದಾದಾರರಾಗಿ. ನಿಮ್ಮ ವೀಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ಹಂಚಿಕೊಳ್ಳಿ. ಅಪ್‌ಲೋಡ್ ಮಾಡಿದ ವಿಡಿಯೋಗಳಿಗೆ ನಿಮ್ಮ ಕಾಮೆಂಟ್‌ಗಳನ್ನು ನೀಡಿ. ನೀವು ಇಷ್ಟಪಡುವ ಅತ್ಯುತ್ತಮ ಐದು (05) ವೀಡಿಯೊಗಳನ್ನು ನಿಮ್ಮ -ಫೇಸ್ ಬುಕ್ ಮತ್ತು ಸಂಕಲ್ಪ BSG ಪುಟಗಳಲ್ಲಿ ಹಂಚಿಕೊಳ್ಳುವುದು.

ಸವಾಲು 5 #ಬಿಎಸ್ಜಿ ವೆಬ್‌ಸೈಟ್

Scanned with CamScanner

ವೆಬ್‌ಸೈಟ್ ಮೂಲಕ ಸ್ಕೌಟ್ ಶಪ್ ಇಂಡಿಯಾಗೆ ಭೇಟಿ ನೀಡಿ ನೀವು ಹೆಚ್ಚು ಇಷ್ಟ ಪಡುವ ಯಾವುದಾದರು ಮೂರು ಉತ್ಪನ್ನಗಳನ್ನು ಆಯ್ಕೆಮಾಡಿ ಮತ್ತು ಅದನ್ನು ಸಂಕಲ್ಪ ಬಿ.ಎಸ್‌ಜಿ ಫೇಸ್‌ಬುಕ್ ಪುಟದಲ್ಲಿ ಹಂಚಿಕೊಳ್ಳುವುದು. ನಿಮ್ಮ ಸಾಮಾಜಿಕ ಜಾಲತಾಣಗಳಲ್ಲಿ ಹ್ಯಾಶ್‌ಟ್ಯಾಗ್ #bsgindia #sankalp-bsg #stayathome #scouts4sdgs #sankalpbyscoutguide ನಲ್ಲಿ ಅಪ್‌ಲೋಡ್ ಮಾಡುವುದು

ಸವಾಲು 6 # Aarogya setu

ನಿಮ್ಮ / ಪೋಷಕರ ಮೊಬೈಲ್ ಫೋನ್‌ನಲ್ಲಿ Aarogya setu ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ; ಕೋವಿಡ್ -19 ಕುರಿತು ಸ್ವಯಂ ಮೌಲ್ಯಮಾಪನ ಮಾಡಿಕೊಳ್ಳಿ. ಇತರ 4 ಜನರೊಂದಿಗೆ ಹಂಚಿಕೊಳ್ಳುವುದು.

ಮೇಲ್ಕಂಡ ಸಂಕಲ್ಪ ಕಾರ್ಯಕ್ರಮದ ಮಾರ್ಗಸೂಚಿಯಂತೆ ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ರೋವರ್ಸ್-ರೇಂಜರ್ಸ್ ಮತ್ತು ಇತರೆ ವಿದ್ಯಾರ್ಥಿಗಳು ಮತ್ತು ದಳನಾಯಕ/ನಾಯಕಿಯರು ಸದರಿ ಸಂಕಲ್ಪ ಕಾರ್ಯಕ್ರಮದಲ್ಲಿ ಮನೆಯಲ್ಲಿಯೇ ಕುಳಿತು ಸಕ್ರಿಯವಾಗಿ ಪಾಲ್ಗೊಳ್ಳಲು ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಹಾಗೂ ರೋವರ್ ಸ್ಕೌಟ್ ಲೀಡರ್ಸ್ ಮತ್ತು ರೇಂಜರ್ ಲೀಡರ್ಸ್‌ಗಳಿಗೆ ಸೂಕ್ತ ನಿರ್ದೇಶನ ನೀಡಿ ಮತ್ತು ಮೇಲ್ಕಂಡ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಬಗ್ಗೆ ಛಾಯಾಚಿತ್ರಗಳನ್ನು ಮತ್ತು ವರದಿಯನ್ನು #bsgindia #sankalp-bsg #stayathome #sankalp ಗೆ ಹ್ಯಾಶ್ ಟ್ಯಾಗ್ ಮಾಡಲು ತಿಳಿಸುವುದು ಹಾಗೂ info@bsgindia.org/ shq@bsgkarnatak.org/ shanthigruha@scout.org.in ಇವರಿಗೆ ಇ-ಮೇಲ್ ಮೂಲಕ ಕಳುಹಿಸಲು ಸುತ್ತೋಲೆ ಹೊರಡಿಸಬೇಕೆಂದು ಹಾಗೂ "ಸಂಕಲ್ಪ" ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ.

ತಮ್ಮ ವಿಶ್ವಾಸಿ,

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಮಾನ್ಯ ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
ಅರಮನೆ ರಸ್ತೆ ಬೆಂಗಳೂರು-01

ಪ್ರತಿಯನ್ನು ಮಾಹಿತಿಗಾಗಿ:-

1.) ಶ್ರೀ ಶ್ರೀಕಾಂತ್ ರವರು, ನೋಡಲ್ ಅಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ ಬೆಂಗಳೂರು-01.
2.) ಶ್ರೀ ಶ್ರೀನಿವಾಸ್ ರವರು, ನೋಡಲ್ ಅಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ ಬೆಂಗಳೂರು-01

Scanned with CamScanner

**P.G.R. SINDHIA,** B.E. (Civil)
STATE CHIEF COMMISSIONER
Former Minister for Health, Finance,
Home, Industries & Transport
Govt. of Karnataka

State Headquarters
No. 39, "Shanthigruha"
Palace Road
Bengaluru-560 001

# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
## THE BHARAT SCOUTS & GUIDES, KARNATAKA

Ref: BSG/SHQ/ 014/ 20-21 Date: 27-4-2020

ಮಾನ್ಯರೇ,

ಕಾಲೇಜು ಶಿಕ್ಷಣ ಆಯುಕ್ತರ ... 10 ... 29 APR 2020

Jd(a)

ವಿಷಯ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ವಿಶೇಷ ಯೋಜನೆ ಸಂಕಲ್ಪ/IGOT ಮೂಲಕ ರಾಜ್ಯದ ಪ್ರಥಮ ದರ್ಜೆ ಕಾಲೇಜುಗಳ ರೋವರ್ಸ್-ರೇಂಜರ್ಸ್‌ಗಳು ಸೇವೆ ಸಲ್ಲಿಸಲು ಅನುಮತಿ ನೀಡುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೊರೋನಾ ಮಹಾಮಾರಿ ರೋಗವು ವ್ಯಾಪಕವಾಗಿ ಹರಡುತ್ತಿದ್ದು. ಈ ರೋಗವನ್ನು ತಡೆಗಟ್ಟುವ ನಿಟ್ಟಿನಲ್ಲಿ ನಾಗರೀಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆಯು ಸಂಕಲ್ಪ ಯೋಜನೆ ಮೂಲಕ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆಯು ಸಹ ಕೊರೋನಾ ಮಹಾಮಾರಿ ರೋಗವನ್ನು ತಡೆಗಟ್ಟಲು ನಾಗರೀಕರಲ್ಲಿ ಜಾಗೃತಿ ಮೂಡಿಸುವುದು ಮತ್ತು ರೋಗ ನಿಯಂತ್ರಿಸುವ ಬಗ್ಗೆ ಸುರಕ್ಷತಾ ಕ್ರಮಗಳನ್ನು ಅನುಸರಿಸುವ ಕುರಿತು ರಾಜ್ಯದ ದಳ ನಾಯಕ/ನಾಯಕಿಯರು ಸ್ವಯಂ ಸೇವಕರು ರೋವರ್ಸ್- ರೇಂಜರ್ಸ್‌ಗಳು ಪೋಷಕರ ಒಪ್ಪಿಗೆಯ ಮೇರೆಗೆ ಕೊರೋನಾ ನಿಯಂತ್ರಣದ ಬಗ್ಗೆ ಸೇವಾಕಾರ್ಯದಲ್ಲಿ ಆಯಾ ಸ್ಥಳೀಯ ಸಂಸ್ಥೆ, ಜಿಲ್ಲಾ ಸಂಸ್ಥೆ ಮತ್ತು ದಳ ಮಟ್ಟದಲ್ಲಿ ಕಾರ್ಯನಿರತರಾಗಿರುತ್ತಾರೆ.

ಲಾಕ್‌ಡೌನ್ ನಂತರದ ಅವಧಿಯಲ್ಲಿಯೂ ಕೂಡ ಈ ಕುರಿತು ಜಾಗೃತಿ ಹಾಗೂ ಸೇವಾ ಕಾರ್ಯದಲ್ಲಿ ತೊಡಗಬೇಕಾಗಿರುವುದರಿಂದ ಸರ್ಕಾರದ ಮಾರ್ಗಸೂಚಿಯಂತೆ ಪ್ರತಿ ಜಿಲ್ಲೆಯಲ್ಲಿ ಸುಮಾರು 150 ರಿಂದ 200 ಜನರ ತಂಡವನ್ನು ರಚಿಸಬೇಕಾಗಿದ್ದು ರಾಜ್ಯದಲ್ಲಿ ಸುಮಾರು 5000 ಸ್ವಯಂ ಸೇವಕರ ತಂಡವನ್ನು ರಿಚಿಸಿ ಇವರು ಆಯಾ ಜಿಲ್ಲಾ, ಸ್ಥಳೀಯ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ/ ತಹಶೀಲ್ದಾರ್ ರವರ ಮಾರ್ಗದರ್ಶನದಲ್ಲಿ ಕಾರ್ಯನಿರ್ವಹಿಸಲು ಕರ್ನಾಟಕ ಕೋವಿಡ್-19 ಟಾಸ್ಕ ಫೋರ್ಸ್ ಮುಖಾಂತರ ಪ್ರತಿ ಜಿಲಾಧಿಕಾರಿಗಳಿಗೆ ಹೆಸರಿನ ಪಟ್ಟಿಯನ್ನು ಕಳುಹಿಸಿಕೊಡಬೇಕಾಗಿರುತ್ತದೆ.

ಆದುದರಿಂದ ಆಸಕ್ತ ಸ್ವಯಂ ಸೇವಕರು ದಳ ನಾಯಕ/ ನಾಯಕಿಯರು ರಾಜ್ಯ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ರೋವರ್ಸ್-ರೇಂಜರ್ಸ್‌ಗಳು 18ವರ್ಷಕ್ಕು ಮೇಲ್ಪಟ್ಟವರು ಪೋಷಕರ ಒಪ್ಪಿಗೆಯನ್ನು ಪಡೆದು ತಮ್ಮ ಹೆಸರನ್ನು ಗೂಗಲ್ ಫಾರ್ಮ್‌ನಲ್ಲಿ ಭರ್ತಿ ಮಾಡಿ https://forms.gle/FtZddHm6f5Bsjq8i6 ನೊಂದಾಯಿಸಲು ಸೂಕ್ತ ನಿದೇಶ೯ನ ನೀಡಿ ಸುತ್ತೋಲೆ ಹೊರಡಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇವೆ.

ರಾಜ್ಯದ ಪ್ರತಿ ರೋವರ್ಸ್ ಮತ್ತು ರೇಂಜರ್ಸ್‌ಗಳು ಮತ್ತು ವಿದ್ಯಾರ್ಥಿಗಳು ಸರ್ಕಾರದಿಂದ ನಿರ್ದೇಶಿತವಾಗಿರುವ http://igot.gov.in ನೊಂದಾಯಿಸಿಕೊಂಡು bsg ಆಯ್ಕೆಮಾಡಿ ಕೋವಿಡ್ -19 ಕುರಿತಾದ ಕೋರ್ಸ್‌ಗಳನ್ನು ಪ್ರಾರಂಭಿಸಿ ಕಲಿತ ಕೋರ್ಸ್‌ಗಳ ಪ್ರಮಾಣಪತ್ರವನ್ನು ಸ್ಕ್ರೀನ್‌ಶಾಟ್ ತೆಗೆದುಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಹುದಾಗಿದೆ. ಈ ಕೋರ್ಸ್‌ಗಳನ್ನು ರಾಜ್ಯದ ಎಲ್ಲಾ ವಿದ್ಯಾರ್ಥಿಗಳು ಕೂಡ ಮಾಡಬಹುದಾಗಿದೆ. ಆದ್ದರಿಂದ ಸದರಿ ಕೋರ್ಸ್‌ಗಳಲ್ಲಿ ರೋವರ್ಸ್- ರೇಂಜರ್ಸ್‌ಗಳು ಹಾಗೂ ವಿದ್ಯಾಥಿಗಳು ಸಂಕಲ್ಪ ಮತ್ತು ಐಜಿಒಟಿ (IGOT)

-2



Scanned with CamScanner

ಕಾರ್ಯಕ್ರಮಗಳಲ್ಲಿ ಭಾಗವಹಿಸಲು ರಾಜ್ಯದ ಎಲ್ಲಾ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಮತ್ತು ದಳ ನಾಯಕ/ನಾಯಕಿಯರಿಗೆ ಸೂಕ್ತ ನಿರ್ದೇಶನ ನೀಡಿ ಸುತ್ತೋಲೆ ಹೊರಡಿಸಿ ಸದರಿ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಸಹಕರಿಸಬೇಕೆಂದು ತಮ್ಮಲ್ಲಿ ವಿನಂತಿಸುತ್ತೇನೆ.

ಸ್ಕೌಟ್ ಗೈಡ್ ವಂದನೆಗಳೊಂದಿಗೆ

ತಮ್ಮ ವಿಶ್ವಾಸಿ

(ಪಿ.ಜಿ.ಆರ್ ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಮಾನ್ಯ ಆಯುಕ್ತರು
ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
ಅರಮನೆ ರಸ್ತೆ, ಬೆಂಗಳೂರು-01

Scanned with CamScanner